ಇಂದು ದಿನಾಂಕಃ 04.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ಬಿ ಎನ್ ಬಿ ವಕೀಲರಿಂದಃ

ಚಿಕ್ಕೇರೂರ ಗ್ರಾಮದಲ್ಲಿ ಒಟ್ಟು 35 ರಿಂದ 40 ಎಕರೆ ಜಮೀನು ನಮ್ಮ ಕುಟುಂಬಕ್ಕೆ ಇರುತ್ತದೆ. ನಾವು 4 ಜನ ಅಣ್ಣ ತಮ್ಮಂದಿರು. ನಾವು ಪ್ರತ್ಯೇಕವಾಗಿ ವಾಸವಾಗಿದ್ದೇವೆ. ನನ್ನ ಹಿಸ್ಸೆಗೆ 20 ಎಕರೆ ಜಮೀನು ಬಂದಿತ್ತು. ಅದರಲ್ಲಿ 16 ಎಕರೆ ಜಮೀನನ್ನು ನಾನು ಈಗಾಗಲೇ ಮಾರಾಟ ಮಾಡಿರುತ್ತೇನೆ. ದಾವಾ ಆಸ್ತಿಯ ಸರ್ವೆನಂ. 265 ಆಗಿರುತ್ತದೆ. ದಾವಾ ಆಸ್ತಿಯು ಚಿಕ್ಕೇರೂರ-ಹಿರೇಕೆರೂರ ರಸ್ತೆಯ ಕಡೆಗೆ ಬರುತ್ತದೆ. ದಾವಾದ ಆಸ್ತಿಗೆ ಹೋಗಲು ನಾವು ಕೆರೆ ಏರಿಯ ಮೂಲಕ ನಮ್ಮ ಆಸ್ತಿಗೆ ಹೋಗಲು ರಸ್ತೆಯನ್ನು ಕೇಳುತ್ತಿದ್ದೇವೆ.

2. ಈ ದಾವೆಯಲಿ ನಾನು ತಾಕೀಥಿಯನ್ನು ಕೇಳಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ಆದೇಶ ವಿರುದ್ಧ ನಾನು ಮೇಲ್ಮನವಿಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ಮೇಲ್ಮನವಿಯ ಆದೇಶ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯ ದಾರವಾಡದಲ್ಲಿ ರಿಟ್ ಪಿಟಿಶನ್ ನಂ. 104678/2020-23 ರಂತೆ ದಾಖಲಿಸಿದ್ದೆ ಎಂದರೆ ಸರಿ. ಸದರಿ ರಿಟ್ ಅರ್ಜಿಯೂ ಕೂಡ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ನಾನು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ. ಸದರಿ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ ನಾನು ಇತ್ತೀಚೆಗೆ ಓ ಎಸ್ ನಂ. 20/2025 ದಾವೆಯನ್ನು ಹೂಡಿ ನ್ಯಾಯಾಲಯದಿಂದ ತಾಕೀಥಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಆ ರೀತಿ ನಾನು ನ್ಯಾಯಾಲಯಕ್ಕೆ ತಪ್ಪು ಸಮಜಾಯಿಶಿ ನೀಡಿ ತಾಕೀಥಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

3. ವಿವಾಧಿತ ಕೆರೆ ಗುತ್ತಿಕಟ್ಟಿ ಕೆರೆ ಆಗಿರುತ್ತದೆ. ಅದರ ರಸ್ತೆ ಸಮನಾಗಿ ಇರದೇ ತಗ್ಗು ದಿಣ್ಣೆಗಳು ಇರುತ್ತವೆ ಎಂದರೆ ಸರಿಯಲ್ಲ. ಸದರಿ ರಸ್ತೆಯಲ್ಲಿ ಕಾಲು ದಾರಿ ಬಿಟ್ಟರೆ ವಾಹನಗಳು ಹಾಗೂ ಬಂಡಿ, ಟ್ರಾಕ್ಟರ್ ಹೋಗಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ರಸ್ತೆ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸದರಿ ರಸ್ತೆಯಲ್ಲಿ ಗಿಡ ಮರಗಳು ಬೆಳೆದುಕೊಂಡಿರುತ್ತವೆ ಎಂದರೆ ಸರಿಯಲ್ಲ. ಸುಮಾರು 6 ತಿಂಗಳಿಂದ ನಾವು ಟ್ರಾಕ್ಟರ್ ನ್ನು ತೆಗೆದುಕೊಂಡು ಹೋಗುತ್ತಿಲ್ಲ. ನಾನು ಯಾವತ್ತೂ ಸದರಿ ರಸ್ತೆಯಲ್ಲಿ ಟ್ರಾಕ್ಟರನ್ನು ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ತಾಕೀತು ಪಡೆದುಕೊಂಡ ನಂತರ ಟ್ರಾಕ್ಟರ್

ನ್ನು ತೆಗೆದುಕೊಂಡು ರಸ್ತೆ ಮಾಡಲು ಹೋಗಿದ್ದೆ ಎಂದರೆ ಸಾಕ್ಷಿಯು ನಾನು ರಸ್ತೆ ಮಾಡಲು



ಹೋಗಿರಲಿಲ್ಲ ನಮ್ಮ ಹೊಲಕ್ಕೆ ಹೋಗಿದ್ದೆವು ಎಂದು ನುಡಿದಿರುತ್ತಾರೆ. ನಾವು ಈಗ ಟ್ರಾಕ್ಟರನ್ನು ತೆಗೆದುಕೊಂಡರೆ ಹೋಗಿ ಬರಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಹೊಲಕ್ಕೆ ಹೋಗಲು ಕುಂತಿ ಗುಡ್ಡದದಿಂದ ಮಲ್ಲೇನಹಳ್ಳಿ ಗಡಿ ದಾರಿ ಮೂಲಕ ಹೋಗಲು ದಾರಿ ಇದೆ ಎಂದರೆ ಸರಿಯಲ್ಲ. ಆ ರೀತಿ ದಾರಿ ಇದ್ದರೂ ಕೂಡ ನಾನು ಇಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಕರೆಯ ಮೇಲೆ ಯಾವುದೇ ದಾರಿ ಇಲ್ಲದಿದ್ದರೂ ದಾರಿ ಇದೆ ಎಂದು ಸುಳುಳ ಸಾಧಿಸುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾನು ಸ್ವಂತ ಸಾಗುವಳಿ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾನು ಮಲ್ಲೇನಹಳ್ಳಿ ಜನರ ಕಡೆಯಿಂದ ಸಾಗುವಳಿ ಮಾಡಿಸುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡುವ ಸಲುವಾಗಿ ದಾರಿ ಮಾಡಿದರೆ ನನ್ನ ಆಸ್ತಿಗೆ ಹೆಚ್ಚಿನ ಬೆಲೆ ಸಿಗುತ್ತದೆ ಎಂಬ ಕಾರಣದಿಂದ ನಾನು ಈ ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ನಾನು ಅನುಬೋಗದ ಹಕ್ಕು ಕೇಳಿಲ್ಲದ ಕಾರಣದಿಂದ ಈ ದಾವೆ ಊರ್ಜಿತ ದಾವೆ ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.